

ಮಂಗಳೂರಿನ ಕುದ್ರೋಳಿ ಗೋಕರ್ಣನಾಥ ಮಂದಿರದಲ್ಲಿನ ದಸರಾ ಆಚರಣೆ ಕರಾವಳಿಯ ನವರಾತ್ರಿ ಸಂಭ್ರಮದ ಕೇಂದ್ರಬಿಂದು. ಚಿತ್ರ: ಗೋವಿಂದರಾಜ ಜವಳಿ

ನಾಡಹಬ್ಬ ಎನ್ನುವುದು ದಸರೆಗಿರುವ ಕೋಡು. ಆದರೆ, ದಸರೆಯ ಜಾಡು ಹಿಡಿದು ಹೋದರೆ, ಅಲ್ಲಿ ಕಾಣಿಸುವ 'ನವರಾತ್ರಿ ಸಂಭ್ರಮ' ಜನರದ್ದಲ್ಲ, ಪ್ರಭುಗಳದು. ವಿಜಯನಗರ ಅರಸರ ಕಾಲದಲ್ಲಿ ವಿರೋಧಿಗಳನ್ನು ಹತ್ತಿಕ್ಕುವ ದಂಡಯಾತ್ರೆಗೆ ಮುನ್ನುಡಿ ರೂಪದಲ್ಲಿ ಆಚರಣೆಗೊಳ್ಳುತ್ತಿದ್ದ ದಸರೆ, ಜನರಲ್ಲಿ 'ರಾಷ್ಟ್ರೀಯ ಮನೋಧರ್ಮ' ರೂಪಿಸುವ ಸಂದರ್ಭವೂ ಆಗಿರುತ್ತಿತ್ತು. ವಿಜಯನಗರ ಪತನದ ನಂತರ ಮಹಾನವಮಿ ದಿಬ್ಬದ ಹಬ್ಬ ಮೈಸೂರಿನಲ್ಲಿ ಜಂಬೂಸವಾರಿಯಾಗಿ ರೂಪುಗೊಂಡಿತು. ಯುದ್ಧಸಂಬಂಧಿ ಉತ್ಸವದ ಆಚರಣೆ ವರ್ಷದಿಂದ ವರ್ಷಕ್ಕೆ ಪ್ರಜಾಪ್ರಭುತ್ವದ ಚಹರೆಗಳನ್ನು ಮೈಗೂಡಿಸಿಕೊಂಡರೂ, ಈಗಲೂ ಹಬ್ಬದ ಆಚರಣೆಯಲ್ಲಿ ಪ್ರಭುತ್ವದ ದರ್ಪ, ಸೈನ್ಯಶಕ್ತಿಯ ಪ್ರದರ್ಶನ ಉಳಿದೇಇದೆ. ಪುರಾಣ ಪುಟಗಳಿಂದ ಹೊಸಗನ್ನಡ ಸಾಹಿತ್ಯದವರೆಗಿನ ಆಕರಗಳ ಮೂಲಕ ದಸರೆಯ ಸ್ವಾರಸ್ಯಕರ ಕಥನವನ್ನು ನಿರೂಪಿಸುವ ಈ ಬರಹ, ಪ್ರಭುಗಳಿಂದ ಪ್ರಜೆಗಳ ಕಡೆಗಿನ ದಸರೆಯ ಚಲನೆಯನ್ನು ಗುರ್ತಿಸುತ್ತದೆ. ಸಾಂಪ್ರದಾಯಿಕ ದಸರೆಯ ಸ್ವರೂಪ ಸಮಕಾಲೀನ ಸಂದರ್ಭದಲ್ಲಿ ಹೇಗಿರಬೇಕು ಎನ್ನುವ ಸೂಚನೆಯೂ ಈ ವಿಶೇಷ ಬರಹದಲ್ಲಿದೆ.

■ **ಕೃಷ್ಣಮೂರ್ತಿ ಹನೂರು**